ಕಾರಣಕ್ಕೆ ಜನರು ಶತ್ರುಗಳಾಗಬೇಕೆಂದು ಇದೆಯೆ? ಹಿಂದೂಗಳ ದೇವರಿಗಿಂತ ಮುಸ್ಲಿಮರ ದೇವರು ಭಿನ್ನವೆ? ಧರ್ಮಗಳು ಒಂದೇ ಗುರಿಯೆಡೆಗೆ ಪಯಣಿಸುವ ಭಿನ್ನ ದಾರಿಗಳು ಮಾತ್ರ. ನಾವೆಲ್ಲಾ ಒಂದೇ ಗುರಿಯೆಡೆಗೆ ಸಾಗುತ್ತಿರುವಾಗ ಭಿನ್ನ ಹಾದಿಗಳನ್ನು ಹಿಡಿಯುವುದರಿಂದ ಆಗುವ ವ್ಯತ್ಯಾಸವಾದರೂ ಏನು!

ಎಲ್ಲಕ್ಕಿಂತ ಹೆಚ್ಚಾಗಿ, ಶೈವ ಮತ್ತು ವೈಷ್ಣವರ ವಿಷಯದಲ್ಲಿ ನೀವು ಹೇಳಿದ ಜನ್ಮಜಾತ ವೈರತ್ವದ ಕುರಿತು ಭೀಕರ ಕತೆಗಳಿವೆ. ಆದರೆ ಈ ಇಬ್ಬರೂ ಒಂದೇ ರಾಷ್ಟ್ರಕ್ಕೆ ಸೇರಿದವರಲ್ಲ ಎಂದು ಯಾರೂ ಹೇಳುತ್ತಿಲ್ಲ, ಅಲ್ಲವೆ?

ಮೂರ್ತಿಭಂಜಕರು ಹಿಂದೂಗಳಲ್ಲೂ ಇದ್ದಾರೆ, ಮುಸ್ಲಿಮರಲ್ಲೂ ಇದ್ದಾರೆ. ಈ ಸತ್ಯವನ್ನು ನಾವು ಅರ್ಥಮಾಡಿಕೊಂಡಷ್ಟೂ ಪರಸ್ಪರ ತಿಳಿವಳಿಕೆಯನ್ನು ಮೂಡಿಸಿಕೊಳ್ಳಲು ಅವಕಾಶವಿದೆ. ಯಾವುದೇ ಧರ್ಮವನ್ನು ನಾವು ಅನುಸರಿಸಿದರೂ ಪರಸ್ಪರ ಜಗಳ ಆಡಬೇಕಿಲ್ಲ ಎನ್ನುವ ಅರಿವು ನಮ್ಮಲ್ಲಿ ಮೂಡಬೇಕಿದೆ.

('ಹಿಂದ್ ಸ್ವರಾಜ್' ಪುಸ್ತಕದಿಂದ)

# 'ರಾಮರಾಜ್ಯ'ದ ಹಲವು ಮುಖಗಳು

**ಕನ್ನಡಕ್ಕೆ: ಬಿ.ಎ. ಶ್ರೀಧರ**

ನನ್ನ ಆದರ್ಶವೆಂದರೆ ಭಾರತದ ಪ್ರತಿಯೊಂದು ಪ್ರಾಂತ್ಯವೂ ರಾಮರಾಜ್ಯ ಆಗಬೇಕು. ಅಗಸನ ಮಾತುಗಳಲ್ಲಿ ರಾಮ ತನ್ನ ಆಡಳಿತದ ನ್ಯೂನತೆಯನ್ನು ಗುರುತಿಸಿದ. ಪ್ರಜೆಗಳ ತೃಪ್ತಿಗಾಗಿ ತನಗೆ ಅತ್ಯಂತ ಪ್ರಿಯಳಾದ ಸೀತೆಯನ್ನು ಕಾಡಿಗೆ ಕಳುಹಿಸಲು ಆತ ಹಿಂಜರಿಯಲಿಲ್ಲ. ನಾಯಿಗೂ ನ್ಯಾಯ ಸಿಗಬೇಕೆಂಬುದು ಆತನ ಆಡಳಿತದ ನೀತಿಯಾಗಿತ್ತು. ಕೊಟ್ಟ ಮಾತಿನ ಪಾಲನೆಗಾಗಿ, ಸತ್ಯಶೋಧನೆಗಾಗಿ ಆತ ತನ್ನ ರಾಜ್ಯ, ಅಧಿಕಾರ ಮತ್ತು ಸುಖಗಳನ್ನೆಲ್ಲಾ ತ್ಯಾಗ ಮಾಡಿ ಅರಣ್ಯವಾಸ ಮಾಡಿದ. ರಾಮನ ಏಕಪತ್ನಿನಿಷ್ಠೆ ರಾಜರು ಮತ್ತು ಆಡಳಿತಗಾರರಿಗೆ ಮಾದರಿಯಾಗುವಂತಹುದು. ಜನಪ್ರಿಯ ಆಡಳಿತದಿಂದ ರಾಮ ತನ್ನ ಆಡಳಿತಕ್ಕೊಂದು ಶೋಭೆ ತಂದುಕೊಟ್ಟ. ಅಂತಹ ಆಡಳಿತ ಸ್ವರಾಜ್ಯದ ತಿರುಳಾಗಬೇಕು. ಓಟುಗಳ ಆಧಾರದ ಮೇಲೆ ರಾಮ ತನ್ನ ಜನಪ್ರಿಯತೆಯನ್ನು ಅಳೆಯುತ್ತಿರಲಿಲ್ಲ. ಅಂತಹ ಯಾವುದೇ ಸಾಧನಗಳ ನೆರವಿಲ್ಲದೆ, ಪ್ರಜೆಗಳ ಅಭಿಪ್ರಾಯವನ್ನು ಗ್ರಹಿಸುವ ಕಲೆ ಅವನಿಗೆ ತಿಳಿದಿತ್ತು. ಆತನ ಆಳ್ವಿಕೆಯಲ್ಲಿ ಜನ ಸಂತೋಷದಿಂದಿದ್ದರು.

ಅಂತಹ ರಾಮರಾಜ್ಯ ಈಗಲೂ ಸಾಧ್ಯ. ರಾಜನ ಗುಂಪಿಗೆ ಸೇರಿದ ಜನ ಈಗಲೂ ನಮ್ಮ ನಡುವೆ ಇದ್ದಾರೆ. ಆಧುನಿಕ ಕಾಲದಲ್ಲಿ ಖಲೀಫರು ಅದ್ಭುತ ಆಡಳಿತಗಾರರಾಗಿದ್ದರು. ಅಬೂಬಕರ್ ಮತ್ತು ಹಜರತ್ ಉಮರ್‌ಗಳು ಲಕ್ಷಾಂತರ ರೂಪಾಯಿಗಳ ತೆರಿಗೆ ಸಂಗ್ರಹಿಸುತ್ತಿದ್ದರು. ಸಾರ್ವಜನಿಕ ಉಪಯೋಗಕ್ಕಲ್ಲದೆ ಮತ್ತಾವುದಕ್ಕೂ ಒಂದೇ ಒಂದು ಕಾಸನ್ನು ಅವರು ಉಪಯೋಗಿಸುತ್ತಿರಲಿಲ್ಲ. ಖಾಸಗಿಯಾಗಿ ಅವರು ಫಕೀರರ ಬದುಕು ನಡೆಸುತ್ತಿದ್ದರು. ಜನಗಳಿಗೆ ನ್ಯಾಯ ದೊರಕಿಸುವುದರತ್ತ ಸದಾ ಮುತುವರ್ಜಿ ವಹಿಸುತ್ತಿದ್ದರು. ಶತ್ರುವಿನ ಜೊತೆಯಲ್ಲಿ ಕೂಡ ನ್ಯಾಯದಿಂದ ನಡೆದುಕೊಳ್ಳಬೇಕೆಂಬುದು ಅವರ ತತ್ತ್ವವಾಗಿತ್ತು.